◆ ಎಲ್ಲಿಯೂ ನಿಲ್ಲದೆ, ಸದಾ ಚಲನಶೀಲವಾಗಿರುವುದು ನಿಮ್ಮ ಗುಣ. ಅದರ ಹಿಂದಿನ ತಾತ್ವಿಕತೆ ಏನು?

ಮೂಲತಃ ನಡೆದಾಡುವ ಪ್ರವೃತ್ತಿ ಹಾಗೂ ನಗರದಿಂದ ಹೊರಗಿದ್ದು ಮನಸ್ಸು ಮತ್ತು ಆರೋಗ್ಯಗಳನ್ನು ಉತ್ತಮವಾಗಿಟ್ಟುಕೊಳ್ಳುವ ಪ್ರಯತ್ನ ಒಂದಾದರೆ, ಬಹುಮುಖ್ಯವಾಗಿ ಜನರಿಲ್ಲದ ಪ್ರಕೃತಿಯ ನಡುವಿನ ನೀರವತೆ, ನಿಗೂಢತೆಗಳನ್ನು ಅನುಭವಿಸುವ ಆಶಯ ಮತ್ತೊಂದು. ಹೀಗಾಗಿಯೇ ಅಚ್ಚರಿಗಳೂ ಎದುರುಗೊಳ್ಳುತ್ತವೆ. ತಿರುವಣ್ಣಾಮಲೈ ಹತ್ತಿರದ ಬೆಟ್ಟವೊಂದರಲ್ಲಿ ಜೈನಸನ್ಯಾಸಿಗಳ ಕಲ್ಲು ಹಾಸಿಗೆಗಳ ಅನ್ವೇಷಣೆ ಇಂತಹವುಗಳಲ್ಲಿ ಒಂದು. ಪ್ರಕೃತಿಯ ಪರಂಪರೆ ಮತ್ತು ನಮ್ಮ ಆದಿಮದ ಸೃಷ್ಟಿಶೀಲತೆಗಳೊಂದಿಗಿನ ಮುಖಾಮುಖಿಯು ಆತ್ಯಂತಿಕ ಅನುಭವ ನೀಡಬಲ್ಲದು.

◆ ದೃಶ್ಯಕಲೆಯ ಕುರಿತ ನಿಮ್ಮ ಆಸಕ್ತಿ ಕೇವಲ ಕ್ಯಾನ್ವಾಸ್ ಮತ್ತು ಶಿಲ್ಪಕ್ಕೆ ಸೀಮಿತವಾಗಿಲ್ಲ. ಅದು ಸಿನಿಮಾಗೂ ವಿಸ್ತರಿಸಿದೆ. ಸಿನಿಮಾ ಬಗ್ಗೆ ನೀವು ಬರೆದದ್ದು ಕಡಿಮೆ. ಅದಕ್ಕೆ ಏನು ಕಾರಣ?

ಸಿನಿಮಾ ಸಹ ದೃಶ್ಯಕಲೆಯ ಒಂದು ಮಾಧ್ಯಮ ಪ್ರಕಾರವೇ ಆಗಿದೆ. ಒಂದೊಂದೇ 'ಬಿಡಿ' ದೃಶ್ಯಚಿತ್ರಗಳ ಚಲನಶೀಲತೆಯಲ್ಲಿ ಸಿನಿಮಾ ರೂಪುಗೊಳ್ಳುತ್ತದೆಯಷ್ಟೆ. ಆ ಬಗ್ಗೆ ಬರೆಯುವುದಕ್ಕಿಂತಲೂ ಅದನ್ನು ಕಲಾಕೃತಿಯೊಂದನ್ನು ಅನುಭವಿಸುವಂತೆಯೇ ನೋಡುವ ಪರಿಪಾಠ. ರವಿಚಂದ್ರನ್ ಅವರ 'ಏಕಾಂಗಿ' ಇರಲಿ, 'ಐಶ್ವರ್ಯ' ಚಿತ್ರವು ಆಧುನಿಕೋತ್ತರ ದೃಷ್ಟಿ ಮತ್ತು ದೃಶ್ಯ ತಾತ್ವಿಕತೆಗಳೆರಡನ್ನೂ ಅರಗಿಸಿಕೊಂಡು ರೂಪುಗೊಂಡಿರುವ ಬಗೆಯು ಅಪೂರ್ವವೇ ಆಗಿದೆ. ಎಂ.ಎಫ್. ಹುಸೇನ್ ತಮ್ಮ ಅಭಿವ್ಯಕ್ತಿಗೆ 1960–70ರ ದಶಕದಲ್ಲಿಯೇ ಈ ಮಾಧ್ಯಮವನ್ನು ದುಡಿಸಿಕೊಂಡರು. ಸಿನಿಮಾ ಅನುಭವದ ಹಲವು ನೋಟಗಳು ನನ್ನ ದೃಶ್ಯಕಲಾ ವಿಮರ್ಶೆಯಲ್ಲಿ ಒಮ್ಮೊಮ್ಮೆ ಹಾಸುಹೊಕ್ಕು ಕಾಣಿಸಿಕೊಂಡಿವೆ.

◆ ಕಲೆ–ಸಂಗೀತದಂತಹ ಕ್ಷೇತ್ರಗಳ ಬರವಣಿಗೆ ಅಂದರೆ ಅದು ಬಹುತೇಕ ಜೀವನ ಚರಿತ್ರೆಯ ಸುತ್ತ ಗಿರಕಿ ಹೊಡೆಯುತ್ತದೆ. ಅದಕ್ಕೇನು ಕಾರಣ? ಭಾಷಿಕ ನೆಲೆಗೆ ಭಿನ್ನವಾದ ಕಲೆಯ ಕ್ಷೇತ್ರಗಳ ವಿವರಣೆ–ವಿಶ್ಲೇಷಣೆಗೆ ಅಗತ್ಯವಾದ 'ಭಾಷೆ' ಯಾಕೆ ರೂಪುಗೊಂಡಿಲ್ಲ?

ಹಾಗೆ ನೋಡಿದರೆ ನಮ್ಮಲ್ಲಿ ಸಮಗ್ರವಾಗಿ ಕನ್ನಡದ ದೃಶ್ಯಕಲಾ ಇತಿಹಾಸವಾಗಲೀ, ನಮ್ಮ ಕಲಾವಿದರ ಜೀವನ ಚರಿತ್ರೆಗಳಾಗಲೀ ಪ್ರಕಟಗೊಂಡಿಲ್ಲ. ಅವು ವೈವಿಧ್ಯಮಯವಾಗಿ ವಿಭಿನ್ನ ದೃಷ್ಟಿಕೋನಗಳಿಂದ ಕಾಣಿಸಿಕೊಳ್ಳದ ಹೊರತು ಅವುಗಳ ವಿಶ್ಲೇಷಣೆಗೆ ಪೂರಕವಾದ ಸಶಕ್ತ ಸಂಕೀರ್ಣ ಭಾಷೆ ರೂಪುಗೊಳ್ಳದೆ ಇರಬಹುದು. ದೃಶ್ಯಕಲೆಯಂತೆ ನಮ್ಮ ಸಂಗೀತ ಮತ್ತು ನೃತ್ಯಗಳು ಬಹುತೇಕ ಇಂದಿಗೂ ಪರಂಪರೆಯನ್ನು ಅನುಸರಿಸುತ್ತಿವೆ. ಅಲ್ಲಿ ವಿಮರ್ಶೆಗಿಂತ 'ರಸ' ಮತ್ತು 'ಆಸ್ವಾದನೆ'ಯ ಸುತ್ತಲೇ ಬರಹಗಳು ಇರುತ್ತವೆ. ದೃಶ್ಯಕಲೆಗಳಾದ ಚಿತ್ರ, ಶಿಲ್ಪ ಇತ್ಯಾದಿಗಳಷ್ಟೆ ಪರಂಪರೆಯನ್ನು ಮೀರಿ ಅಭಿವ್ಯಕ್ತಿಸುವ ಸಾಹಸಕ್ರಮಗಳನ್ನು ಅನುಸರಿಸಿವೆ. ಆ ಕುರಿತ ಬರಹ ಪರಂಪರೆಯಿಂದ ಭಿನ್ನವಾಗಿಯೇ ಇವೆ. ಹೊಸ, ಅಪೂರ್ವ, ಕಲಾಸೃಷ್ಟಿಯ ಸಂದರ್ಭವೊಂದು ಹೊಸ ಭಾಷೆಯ ಬೆಳವಣಿಗೆಯನ್ನು ಬೇಡುತ್ತದೆ. ಅದನ್ನು ಬಗೆಯುವ ಬರಹವು ಮೂಡಿಬರುತ್ತದೆ. ನಮ್ಮಲ್ಲಿ ಪಶ್ಚಿಮ ಮತ್ತು ಯುರೋಪು ಮೂಲದ ದೃಷ್ಟಿ ಧೋರಣೆಗಳ ಪ್ರಭಾವದ, ಕೆಲವೊಮ್ಮೆ appropriate ಮಾಡಿಕೊಂಡ ಅಭಿವ್ಯಕ್ತಿಗಳೇ ಹೆಚ್ಚಾಗುತ್ತಿವೆ. ಯಾವುದೇ ಒಂದು ಪದದ 'ಸೃಷ್ಟಿ' ಮತ್ತು 'ಅಸ್ತಿತ್ವ'ಗಳು ಒಂದು ನಿಸ್ಪೃಷ್ಟ, ನಿರ್ದಿಷ್ಟ ಸಂವೇದನಾಶೀಲ ಅಭಿವ್ಯಕ್ತಿಗಳು ನಿರಂತರವಾಗಿ ಕಾಣಿಸಿಕೊಂಡಾಗ ಸಾಧಿತವಾಗುತ್ತವೆ. ಒಂದು ವಿಶಿಷ್ಟ ಸಂದರ್ಭವೂ (context) ಹೊಸ ಸಂವೇದನಾಶೀಲ ಅಭಿವ್ಯಕ್ತಿಗೆ